ಪಿ. ಡಬ್ಲ್ಯೂ: 1

( ಇಂದು ದಿಃ 10/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಕಳೆದ 9 ವರ್ಷಗಳಿಂದ ಪಿರ್ಯಾದಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ . ಆರೋಪಿಗೆ ಈ ಮೊದಲು ಸಾಲ ನೀಡುವಾಗ ಪಿರ್ಯಾದಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನು. ಆರೋಪಿಯ ವಿರುದ್ಧ ಎಷ್ಟು ಪ್ರಕರಣ ದಾಖಲಿಸಿದ್ದೇವೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಆರೋಪಿ ವಿರುದ್ಧ ಪ್ರಕರಣಗಳನ್ನು ದಾಖಲಿಸಿರುವುದು ನಿಜ. ಸದರಿ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನಗೆ ಆಡಳಿತ ಮಂಡಳಿಯಿಂದ ಅಧಿಕಾರ ನೀಡಿದ್ದು ಸದರಿ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಯಥಾ ನಕಲನ್ನು ಹಾಜರುಪಡಿಸಿರುತ್ತೆವೆ. ನಮ್ಮ ಸಂಸ್ಥೆ ಕಾನೂನಿನಡಿ ನೊಂದಣಿ ಆಗಿದೆ ತೋರಿಸಲು ದಾಖಲೆ ಇದೆ ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಆರೋಪಿ ಹೆಂಡತಿ ನಮ್ಮ ಸಂಸ್ಥೆಯಲ್ಲಿ ಸಾಲ ಪಡೆದಿದ್ದರು ಸದರಿ ಸಾಲಕ್ಕೆ ಆರೋಪಿ ಜಾಮೀನುದಾರರು ಆಗಿದ್ದರು. ಆರೋಪಿಗೆ ಗೃಹ ಬಳಕೆಯ ರೂ. 50,000 ಸಾಲ ನೀಡಿರುತ್ತೇವೆ. ಗೃಹ ಬಳಕೆ ವಸ್ತುಗಳ ಕ್ವಾಟೇಶನ್ ಅನ್ನು ನೀಡಿಲ್ಲ ಮತ್ತು ಅದನ್ನು ನಾವು ಕೇಳಿ ತಿಳಿದುಕೊಂಡಿಲ್ಲ. ಸದರಿ ಸಾಲ ಕಟ್ಟು ಬಾಕಿ ಆಗುವಾಗ ಜಾಮೀನುದಾರರ ವಿರುದ್ಧ ಕ್ರಮ ತೆಗೆದುಕೊಂಡಿರುತ್ತೇವೆ. ಸಾಲದ ಮೊತ್ತದಲ್ಲಿ ರೂ. 10,000 ಎಫ್ ಡಿ ಮತ್ತು ರೂ. 2500 ಷೇರಿನ ಮೊತ್ತ ನಾವು ಇಟ್ಟುಕೊಂಡಿರುತ್ತೆವೆ. ಅರೊಪಿ ಿಗೆ ಒಟ್ಟು ರೂ. 37,500 ಸಾಲ ನೀಡಿದ್ದು ಯಾವುದೆ ೀಸಾಲದ ಕಂತನ್ನು ಆರೊಪಿ ಕಟ್ಟಿರುವುದಿಲ್ಲ. ಸಾಲದ ಸ್ಟೇಟಮೆಂಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಬರವಣಿಗೆಯಲ್ಲಿರುವ ಲೋನ್ ಲೆಡ್ಜರನ್ನು ನಾವು ಇರುವುದಿಲ್ಲ. ಆರೋಪಿಯು ಯಾವ ದಿನಾಂಕಕ್ಕೆ ಚೆಕ್ಕನ್ನು ನೀಡಿದ್ದಾರೆಂದು ತೋರಿಸಲು ದಾಖಲೆಗಳು ಇವೆ. ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಚೆಕ್ಕಿನ ಮೇಲೆ ಆರೋಯ ಸಹಿ ಕನ್ನಡದಲ್ಲಿ ಬರವಣಿಗೆಗಳು ಇಂಗ್ಲಿಷ ನಲ್ಲಿವೆ ಎಂದರೆ ಸರಿ. ಆರೋಪಿ ಚೆಕ್ಕನ್ನು ನಮ್ಮ ಸಮಕ್ಷಮ ಬರೆದಿಲ್ಲ.ವಕೀಲರು ನೊಟೀಸು ಅನಕ್ಲೇಮಮ್ಡು ಎಂಬ ಷರಾ ದೊಂದಿಗೆ ವಾಪಸ್ಸು ಆಗಿದೆ. ಆರೋಪಿಯು ನಮ್ಮ ಸಂಸ್ದೆಯಲ್ಲಿ ಪಡೆದ ಸಾಲ ಸಂಪೂರ್ಣವಾಗಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಂಪೂರ್ಣವಾಗಿ ಸಾಲ ಚುಕ್ತಾ ಮಾಡಿದ್ದರೂ ಸಹ ಆರೊಪಿ ವಿರುದ್ದ ಸುಳ್ಳು ಪ್ರರಕಣದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಹಿಂದಿನ ಸಾಲಕ್ಕೆ ಭದ್ರತೆಗಾಗಿ

ನೀಡಿದ ಚೆಕ್ಕನ್ನು ನಾವು ದುರುಪಯೋಗಪಡಿಸಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಿ ಹಿಂದಿನ ಸಾಲದ ಮೊತ್ತ ನೀಡಿದ್ದರೂ ಸಹ ಚೆಕ್ಕನ್ನು ವಾಪಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸಾಲದ ಮರುಪಾವತಿಗಾಗಿ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ . ಸದರಿ ಪ್ರಕರಣ ನಡೆಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ನೌಟೀಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿದ ಎಲ್ಲಾ ದಾಖಲೆಗಳು ಸದರಿ ಪ್ರಕರಕ್ಕಾಗಿ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ಲಿಖಿತವಾದ ಲೆಡ್ಜರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ನ್ಯಾಯಾಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ ಆರೋಪಿಗೆ ಅನ್ಯಾಯಾ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೇ.ಕೇ. ಸರಿ ಇದೆ

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ